ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,**
**ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ : ಸಿ5(2)ಮುಂಬಡ್ತಿ– 19/2020–21** **ದಿನಾಂಕ : 25–11–2020.**

**ಜ್ಞಾಪನಾ**

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು(ಆಡಳಿತ) ರವರಿಗೆ ಪತ್ರಾಂಕಿತ ಸಹಾಯಕರ ವೃಂದದ ಹುದ್ದೆಗೆ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಸಿ5[2] ಅಂ.ಜ್ಯೇ.ಪ.23/2020–21 ದಿನಾಂಕ:03–10–2020.

* * * * * * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ಆಡಳಿತ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಖಾಲಿ ಇರುವ ಪತ್ರಾಂಕಿತ ಸಹಾಯಕರ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇರೆಗೆ ಅರ್ಹರಿರುವ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರುಗಳಿಗೆ ಬಡ್ತಿಯನ್ನು ನೀಡಲು ಉದ್ದೇಶಿಸಲಾಗಿದ್ದು, ಜೇಷ್ಠತೆಯನುಸಾರ ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು ರವರ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ. ಸದರಿಯವರ ಈ ಕೆಳಕಂಡ ದಾಖಲೆಗಳನ್ನು ಒಳಗೊಂಡ ಡೋಸಿಯರ್‌ನ್ನು ಸಿದ್ಧಪಡಿಸಿ ಆದ್ಯತೆಯ ಮೇರೆಗೆ ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

1. 2015–16 ರಿಂದ 2019–20 ರವರೆಗಿನ ಕಾರ್ಯ ನಿರ್ವಹಣಾ ವರದಿಗಳಲ್ಲಿ ಪರಿಶೀಲನಾಧಿಕಾರಿಗಳ ಹಾಗೂ ಅಂಗೀಕರಿಸುವ ಅಧಿಕಾರಿಗಳ ಷರಾ ಹಾಗೂ ಸಹಿಯನ್ನು **ಕಡ್ಡಾಯವಾಗಿ** ಪಡೆದು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಪುರಸ್ಕರಿಸಲಾಗುವುದಿಲ್ಲ.
2. ಪ್ರತಿ ಅಧಿಕಾರಿಯ ಸೇವಾ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. **ಒಂದು ವೇಳೆ ಪಟ್ಟಿಯಲ್ಲಿರುವ ಸಿಬ್ಬಂದಿಗಳ ವಿರುದ್ಧ ಶಿಸ್ತು ಪ್ರಕರಣ / ನ್ಯಾಯಾಲಯ ಪ್ರಕರಣ ಬಾಕಿ ಇದ್ದಲ್ಲಿಯೂ ಸಹ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳ ಪ್ರಮಾಣ ಪತ್ರಗಳ ಪ್ರತಿಯನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**
4. **ಈ ಹಿಂದೆ ಶಿಸ್ತು ಪ್ರಕರಣ ಬಾಕಿ ಇದ್ದ ಅಧಿಕಾರಿಗಳಲ್ಲಿ ಪ್ರಸ್ತುತ ಶಿಸ್ತು ಪ್ರಕರಣ ಇತ್ಯರ್ಥವಾಗಿದ್ದಲ್ಲಿ ಈ ಬಗ್ಗೆ ಧೃಡೀಕರಣ ಹಾಗೂ ಅವರುಗಳ ಕಾರ್ಯನಿರ್ವಹಣಾ ವರದಿಗಳನ್ನು ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸುವುದು.**
5. **ಒಂದು ವೇಳೆ ಅರ್ಹ ಪ್ರಕರಣಗಳು ಕೈಬಿಟ್ಟಿದಂತಹ ಪಕ್ಷದಲ್ಲಿ ಪರಿಶೀಲಿಸಿಕೊಂಡು ಅರ್ಹ ಪ್ರಕರಣವಾಗಿದ್ದಲ್ಲಿ ನಿಮ್ಮ ಅಭಿಪ್ರಾಯದೊಂದಿಗೆ ಅಂತಹ ಸೂಕ್ತ ಪ್ರಸ್ತಾವನೆಯನ್ನು ಸಹ ಸಲ್ಲಿಸುವುದು.**

ಪ್ರತಿ ಅಧಿಕಾರಿವಾರು ಮಾಹಿತಿ/ದಾಖಲೆಗಳನ್ನು ಒಳಗೊಂಡಿರುವ ಪ್ರಸ್ತಾವನೆಯನ್ನು **ದಿನಾಂಕ:30–11–2020** ರೊಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸಲು ತಿಳಿಸಿದೆ.

**ಷರಾ: ಮೇಲೆ ಮುಂಬಡ್ತಿ ಕುರಿತಂತೆ ಕೋರಿರುವ ಮಾಹಿತಿ/ದಾಖಲೆಗಳು ಮತ್ತು ವ್ಯತಿರಿಕ್ತ ಷರಾಗಳನ್ನು ನಿಗಧಿತ ಸಮಯದೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ದಾಖಲೆ ಮತ್ತು ಮಾಹಿತಿಗಳು ಸಲ್ಲಿಸದಿದ್ದಲ್ಲಿ ಪಟ್ಟಿಯಲ್ಲಿರುವ ಅಧಿಕಾರಿಗಳ ಮೇಲೆ ಯಾವುದೇ ವ್ಯತಿರಿಕ್ತ ಷರಾ ಇರುವುದಿಲ್ಲವೆಂದು ಭಾವಿಸಿ ಮುಂಬಡ್ತಿಗೆ ಕ್ರಮ ವಹಿಸಲಾಗುವುದು. ನಂತರ ಬಡ್ತಿಯಿಂದಾಗಿ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಸಂಬಂಧಪಟ್ಟಂತಹ ಅಧಿಕಾರಿ/ನೌಕರರನ್ನು ಜವಾಬ್ದಾರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ವಹಿಸಲಾಗುವುದು ಎಂದು ತಿಳಿಸಿದೆ.**

**[ಮಾನ್ಯ ಆಯುಕ್ತರ ಆದೇಶದ ಮೇರೆಗೆ]**

**(ಸಿರಿಯಣ್ಣವರ ಲಲಿತ ಚಂದ್ರಶೇಖರ್)**
**ನಿರ್ದೇಶಕರು(ಆಡಳಿತ)ಹೆ.ಪ್ರ**

ಇವರಿಗೆ :–

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ರವರಿಗೆ.
2. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಡಿ.ಎಸ್.ಇ.ಆರ್.ಟಿ. ಕಟ್ಟಡ, 100 ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು,
4. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರಿಗೆ.
5. ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ ಮುಂದಿನ ಕ್ರಮಕ್ಕಾಗಿ
6. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
7. ಸಂಬಂಧಿಸಿದ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ
8. ಕಛೇರಿ ಪ್ರತಿ.

**ಈ ಜ್ಞಾಪನವನ್ನು ಇಲಾಖೆಯ ಅಂತರಜಾಲ www.schooleduction.kar.nic.in ರಲ್ಲಿ ಪ್ರಕಟಿಸಲಾಗಿದೆ.**

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ : ಸಿ5(2)ಮುಂಬಡ್ತಿ-19/2020-21 ದಿನಾಂಕ : 25-11-2020.

## ಅನುಬಂಧ

ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಯಿಂದ ಪತ್ರಾಂಕಿತ ಸಹಾಯಕರ ವೃಂದಕ್ಕೆ ಬಡ್ತಿಯನ್ನು ನೀಡುವ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಬೇಕಾದ ಅಧಿಕಾರಿಗಳ ವಿವರ

| ಕ್ರ.ಸಂ. | ಅಧಿಕಾರಿಯ ಹೆಸರು ಮತ್ತು ಕಛೇರಿ ವಿಳಾಸ | ಪತ್ರಾಂಕಿತ ವ್ಯವಸ್ಥಾಪಕರ ಪಟ್ಟಿಯಲ್ಲಿ ಜ್ಯೇಷ್ಠತಾ ಸಂಖ್ಯೆ | ಪ್ರವರ್ಗ |
|---|---|---|---|
| 1 | ಶ್ರೀ ಸೈಯದ್ ವಜೀರ್ ಅಹಮದ್, ಪತ್ರಾಂಕಿತ ವ್ಯವಸ್ಥಾಪಕರು, ಪ್ರಸ್ತುತ ನಿಯೋಜನೆ ಮೇರೆಗೆ ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧೀ ನಿಗಮ, 12 ನೇ ಮಹಡಿ ವಿವಿ ಗೋಪುರ ಡಾ॥ ಬಿ.ಆರ್.ಅಂಬೇಡ್ಕರ್ ಬೀದಿ, ಬೆಂಗಳೂರು | 195 [ಹೊಸ ಸೇರ್ಪಡೆ] | ಇತರೆ |
| 2. | ಶ್ರೀ.ಅರಿಪ್ ಉಲ್ಲಾ ಖಾನ್. ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-2, ರಾಜಾಜಿನಗರ, ಬೆಂಗಳೂರು. | 198 [ಶಿಸ್ತು ಕ್ರಮ ಮುಕ್ತಾಯ] | ಇತರೆ |
| 3 | ಬಿ.ಎಸ್. ಶಾಂತರಾಜು, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ. | 202 | ಇತರೆ |
| 4 | ಟಿ.ಎ.ಬಸವರಾಜು, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ | 203 | ಇತರೆ |
| 5 | ಶ್ರೀಮತಿ ಉಷಾದೇವಿ ಸಹಾಯಕ ನಿರ್ದೇಶಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು | 204 | ಇತರೆ |
| 6 | ಡಿ. ಕೊಟ್ರೇಶ್, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಜಗಳೂರು ತಾಲ್ಲೂಕು, ದಾವಣಗೆರೆ. | 205 | ಎಸ್.ಟಿ. |
| 7 | ಸಿ.ಡಿ. ನಿಜಗುಣ, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹೊಸನಗರ ತಾಲ್ಲೂಕು, ಶಿವಮೊಗ್ಗ. | 243 | ಎಸ್.ಸಿ |
| 8 | ಹೆಚ್.ಎಸ್.ಹುತ್ತೇಶ್, ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ | 274 | ಎಸ್.ಸಿ. |

(ಸಿರಿಯಣ್ಣವರ ಲಲಿತ ಚಂದ್ರಶೇಖರ್)
ನಿರ್ದೇಶಕರು(ಆಡಳಿತ)ಹೆ.ಪ್ರ

# ನಮೂನೆ

**<u>ಪತ್ರಾಂಕಿತ ಸಹಾಯಕರ ವೃಂದಕ್ಕೆ ಬಡ್ತಿ ನೀಡಲು ಅಗತ್ಯವಿರುವ ಮಾಹಿತಿ</u>**

| ಕ್ರ.ಸಂ. | ಅಧಿಕಾರಿಗಳ ಸೇವಾ ವಿವರ | ಮಾಹಿತಿ |
|---|---|---|
| 1 | ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು ಹುದ್ದೆಯ ಜೇಷ್ಠತಾ ಸಂಖ್ಯೆ | |
| 2 | ಪ್ರಥಮ ಕೆ.ಜಿ.ಐ.ಡಿ. ಸಂಖ್ಯೆ | |
| 3 | ಅಧಿಕಾರಿಯ ಹೆಸರು | |
| 4 | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ಪೂರ್ಣ ವಿಳಾಸ | |
| 5 | ಮೊಬೈಲ್ ಸಂಖ್ಯೆ : | |
| 6 | ಜನ್ಮ ದಿನಾಂಕ | |
| 7 | ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು ಹುದ್ದೆಯಲ್ಲಿ ಬಡ್ತಿ ಸಕ್ರಮಗೊಂಡ ದಿನಾಂಕ | |
| 8 | ಗುಂಪು (ಪ.ಜಾತಿ, ಪ.ವರ್ಗ/ ಇತರೆ ) | |
| 9 | ಇಲಾಖಾ ಪರೀಕ್ಷಗಳಲ್ಲಿ ಉತ್ತೀರ್ಣತೆ<br>4. ಅಕೌಂಟ್ಸ್ ಹೈಯರ್<br>5. ಜನರಲ್ ಲಾ ಭಾಗ 1<br>6. ಕನ್ನಡ ಭಾಷಾ ಪರೀಕ್ಷೆ | **<u>ನೋಂದಣಿ ಸಂಖ್ಯೆ ದಿನಾಂಕ</u>** |
| 10 | ಕಾರ್ಯನಿರ್ವಹಣಾ ವರದಿಗಳು 2015–16 ರಿಂದ 2019–20 ರವರೆಗೆ ವರ್ಷವಾರು ಪ್ರತ್ಯೇಕವಾಗಿ [ಕಾರ್ಯನಿರ್ವಹಣಾ ವರದಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ವಿಶೇಷ ವರದಿ ಸಲ್ಲಿಸತಕ್ಕದ್ದು | 2015–16<br>2016–17<br>2017–18<br>2018–19<br>2019–20 |
| 11 | ಇಲಾಖಾ ವಿಚಾರಣೆ / ದೂರು/ ನ್ಯಾಯಲಯದ ಪ್ರಕರಣಗಳು ಇದ್ದಲ್ಲಿ ವಿವರ | |
| 12 | ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ಅಧಿಕಾರಿಗಳಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸುವುದು. | |
| 13 | ಷರಾ | |

ಮೇಲ್ಕಂಡ ಎಲ್ಲಾ ಅಂಶಗಳು ಸಂಬಂಧಿತ ಅಧಿಕಾರಿಗಳ ಸೇವಾ ವಿವರವನ್ನು ಅವರ ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿ, ಮಾಹಿತಿಯನ್ನು ನೀಡಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ :

ಸ್ಥಳ :

ಕಛೇರಿ ಮುಖ್ಯಸ್ಥರ ಸಹಿ
ಮೊಹರಿನೊಂದಿಗೆ